ಸರ್ಕಾರವು ಯೋಜನೆಯನ್ನು ರೂಪಿಸಿ, ರೈತರಿಗೆ ಉತ್ತೇಜನವನ್ನು ನೀಡಲಾಗುತ್ತಿದೆ. ಅವುಗಳಲ್ಲಿ ಮುಖ್ಯವಾದುವುದೆಂದರೆ ಸಾವಯವ ಕೃಷಿ ಯೋಜನೆ, ಜೈವಿಕ ಗೊಬ್ಬರ ಯೋಜನೆ ಸುಧಾರಿತ ಕಾಂಪೋಸ್ಟ್ ಉತ್ತೇಜನ, ಸಮಗ್ರಹೀಡೆನಾಶಕ ಬಳಕೆ, ಹಸಿರೆಲೆ ಗೊಬ್ಬರ ಮತ್ತು ಎರೆಹುಳು ಗೊಬ್ಬರಕ್ಕೆ ಉತ್ತೇಜನ, ಪರತಂತ್ರಜೀವಿಗಳ ಉಪಯೋಗ ಹಾಗೂ ಸಮಗ್ರ ಪೋಷಕಾಂಶಗಳ ನಿರ್ವಹಣಾ ಕಾರ್ಯವನ್ನು ವಿವಿಧಯೋಜನೆಗಳಲ್ಲಿ ಜನಪ್ರಿಯಗೊಳಿಸಲಾಗುತ್ತಿದೆ. ಬೆಳೆ ಉತ್ಪಾದನಾ ಯೋಜನೆಯಲ್ಲಿ ಈ ಕಾರ್ಯಕ್ರಮಕ್ಕೆ ಅನುದಾನವನ್ನು ಸಹ ಮೀಸಲಾಗಿಟ್ಟಿದೆ.

ಕೋಲಾರ ಜಿಲ್ಲೆಯಲ್ಲಿ ಬಸ್ ಮಾರ್ಗಗಳಿಗೆ ಅನುಮತಿ.

538: (3822)

ಶ್ರೀ ಎಸ್.ರಾಜೇಂದ್ರನ್ (ಕೆ.ಜಿ.ಎಫ್): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ನೀಡಲಾದಮಜಲು ವಾಹನ ಪರವಾನಗಿಗಳ ಒಟ್ಟು ಸಂಖ್ಯೆ;

ಆ) ಅವುಗಳಲ್ಲಿ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತರಿಗೆ ನೀಡಲಾದ ಪರವಾನಗಿಗಳು ಎಷ್ಟು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) ಕೋಲಾರ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ನೀಡಲಾದ ಮಜಲು ವಾಹನ ಪರವಾನಗಿಗಳ ವಿವರ ಈ ಕೆಳಕಂಡಂತಿದೆ.

1995-96	21
1996-97	07
1997-98	08
1998-99	05 (31-10-98ರವರೆಗೆ)

ಆ)

		95-96	96-97	97-98	98-99 (31-10-98)
1)	ಪರಿಶಿಷ್ಟ ಜಾತಿ	ಇಲ್ಲ	01	ಇಲ್ಲ	ಇಲ್ಲ
2)	ಪರಿಶಿಷ್ಟ ಪಂಗಡ	ಇಲ್ಲ	ಇಲ್ಲ	ಇಲ್ಲ	ಇಲ್ಲ
3)	ಅಲ್ಪ ಸಂಖ್ಯಾತರು	07	02	05	03
4)	ಇತರೆ	14	04	03	02
		21	**07**	**08**	**05**

ರಿಜಿಸ್ಟ್ರೇಷನ್ ಶುಲ್ಕ ಪರಿಷ್ಕರಣೆ

539: (3838)

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಆಸ್ತಿಪಾಸ್ತಿಗಳ ಬಗ್ಗೆ ರಿಜಿಸ್ಟ್ರೇಷನ್ ಶುಲ್ಕವೇ ಹೆಚ್ಚಾಗಿರುವುದರಿಂದ ರಿಜಿಸ್ಟ್ರೇಷನ್ ಮಂದಗತಿಯಲ್ಲಿ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಸರ್ಕಾರವು ರಿಜಿಸ್ಟ್ರೇಷನ್ ಶುಲ್ಕವನ್ನು ಪುನರ್ ಪರಿಶೀಲಿಸುವುದೇ?

ಶ್ರೀ ಬಿ.ಸೋಮಶೇಖರ್ (ಕಂದಾಯ ಮಂತ್ರಿಗಳು):

ಅ) ಹೌದು

ಆ) ಶ್ರೀಘ್ರದಲ್ಲಿಯೇ ಸ್ಥಿರಾಸ್ತಿಗಳ ಮಾರುಕಟ್ಟೆ ದರಗಳನ್ನು ಪುನರ್ ನಿಗದಿಪಡಿಸಿ ಪ್ರಕಟಿಸಲಾಗುವುದು.

ತುಮಕೂರು ಜಿಲ್ಲೆಯಲ್ಲಿ ತೆಂಗಿನ ಮರಗಳಿಗೆ ಕೆಂಪು ಮೂತಿ ಹುಳುವಿನ ರೋಗ.